**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1468/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಕರಿಯಪ್ಪ | ಪ್ರಾಸಾ-3 |
| ತಂದೆಯ ಹೆಸರು | : ಪರ್ಣಾ ಮೇಸ್ತ್ರಿ | ಚಾಸಾ-3 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 12.09.2025 |
| ವಾಸಸ್ಥಳ | : ದೊಡ್ಡಹಳ್ಳ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿಗಳ ಪರಿಚಯ ನನಗಿದೆ. 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1, 2 ಮತ್ತು 4 ರಿಂದ 6 ರವರ ಪರಿಚಯ ನನಗಿದೆ.

20.04.2023 ರಂದು ಸ.5.00 ರ ಸಮಯದಲ್ಲಿ 1 ನೇ ಆರೋಪಿಯು ತಿರುಗಾಡುವಂತಹ ರಸ್ತೆಯನ್ನು ಚಾಸಾ-1 ಮತ್ತು 2 ರವರು ಮುಚ್ಚಿರುತ್ತಾರೆ. ಸದರಿ ರಸ್ತೆಯು ಸ.ನಂ.255 ರಲ್ಲಿರುತ್ತದೆ. ಸದರಿ ರಸ್ತೆಯನ್ನು ಪೂರ್ವಜರ ಕಾಲದಿಂದ ಉಪಯೋಗಿಸುತ್ತಿದ್ದ ಕಾರಣ 1 ನೇ ಆರೋಪಿಯು ಚಾಸಾ-1 ಮತ್ತು 2 ರವರನ್ನು ರಸ್ತೆಯನ್ನು ಮುಚ್ಚಿರುವ ಕುರಿತು ಪ್ರಶ್ನಿಸಲಾಗಿ, ಚಾಸಾ-1 ರವರು 1 ನೇ ಆರೋಪಿಯನ್ನು ತಳ್ಳಿರುತ್ತಾರೆ. ಪ್ರಸ್ತುತ ಪ್ರಕರಣಕ್ಕೆ ಸಂಭಂಧಿಸಿದಂತೆ ನಾನು ಪೋಲಿಸರು ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ನೋಡಿ ಈ ಹಿಂದೆ ಎಂದೂ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.28.04.2023 ರಂದು ಸಾಕ್ಷಿಯು ಪೋಲಿಸರ ಮುಂದೆ ನೀಡಿದಂತಹ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿಗಳು ನಮ್ಮ ಊರಿನವರು ಮತ್ತು ನಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1468/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ರಮೇಶ್ | ಪ್ರಾಸಾ-4 |
| ತಂದೆಯ ಹೆಸರು | : ಸೋಮಯ್ಯ | ಚಾಸಾ-4 |
| ವಯಸ್ಸು | : 42 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 12.09.2025 |
| ವಾಸಸ್ಥಳ | : ದೊಡ್ಡಹಳ್ಳ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿಗಳ ಪರಿಚಯ ನನಗಿದೆ. 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1 ರಿಂದ 3, 5 ಮತ್ತು 6 ರವರ ಪರಿಚಯ ನನಗಿದೆ.

20.04.2023 ರಂದು ನಾನು, ಚಾಸಾ-5 ಮತ್ತು 6 ರವರು ನಮ್ಮ ಮನೆಯ ಬಳಿ ಗಾರೆ ಕೆಲಸ ಮಾಡುತ್ತಿರುವಾಗ ಗಲಾಟೆ ಮಾಡುತ್ತಿರುವ ಶಬ್ದ ಕೇಳಿ ಬಂದಿರುತ್ತದೆ. ಸದರಿ ಗಲಾಟೆಯು ರಸ್ತೆಯ ವಿಚಾರವಾಗಿ ಆಗಿರುತ್ತದೆ. ಸದರಿ ರಸ್ತೆಯು ಚಾಸಾ-1 ರವರಿಗೆ ಸೇರಿದ್ದಾಗಿರುತ್ತದೆ. ಈ ಪೂರ್ವದಲ್ಲಿ ಸದರಿ ರಸ್ತೆಯು ಕಿರಿದಾಗಿದ್ದು ನಂತರ ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ಸದರಿ ರಸ್ತೆಯನ್ನು ಚಾಸಾ-1 ರವರ ಮದುವೆ ಸಮಯದಲ್ಲಿ ಅಗಲೀಕರಣ ಮಾಡಲಾಗಿರುತ್ತದೆ. ಸದರಿ ರಸ್ತೆಯನ್ನು ಪುನಃ ಕಿರಿದಾಗಿ ಮಾಡಲು ಹೋದ ಸಮಯದಲ್ಲಿ ಜಗಳವು ಸಂಭವಿಸಿರುತ್ತದೆ. ನಾವು ಕೆಲಸವನ್ನು ಬಿಟ್ಟು ಅಲ್ಲಿಗೆ ಹೋಗುವಷ್ಟರಲ್ಲಿ ಜಗಳವು ಮುಗಿದಿರುತ್ತದೆ. ಇದನ್ನು ಹೊರತು ಪಡಿಸಿ ನನಗೆ ಇನ್ಯಾವುದೇ ವಿಷಯ ತಿಳಿದಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ನೋಡಿ ಈ ಹಿಂದೆ ಎಂದೂ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.20.04.2023 ರಂದು ಸ.7.00 ರ ಸಮಯಕ್ಕೆ ಘಟನೆ ನಡೆಯುತ್ತಿದ್ದ ಸ್ಥಳಕ್ಕೆ ನಾನು ಚಾಸಾ-5 ಮತ್ತು 6 ರವರು ಬಂದಿರುತ್ತೇವೆ ಎಂದರೆ ಸರಿ. ಗಲಾಟೆ ಸಂಭವಿಸುತ್ತಿದ್ದ ಜಾಗವು ಚಾಸಾ-1 ರವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಚಾಸಾ-1 ರವರ ತೋಟಕ್ಕೆ

ದಾಖಲಿಸಿಕೊಂಡಿರುತ್ತೇನೆ ಕರುಗಳು ನುಗ್ಗಿ ಹಾಳುಮಾಡುತ್ತವೆ ಎಂಬ ಕಾರಣಕ್ಕೆ ಬೇಲಿಯನ್ನು ಹಾಕುತ್ತಿದ್ದರು ಎಂದರೆ ಸರಿ. ಬೇಲಿ ಹಾಕಿದ ನಂತರವೂ ಸದರಿ ರಸ್ತೆಯಲ್ಲಿ ಜನರು ಓಡಾಡಬಹುದಿತ್ತು ಎಂದರೆ ಸರಿ. ಚಾಸಾ-3 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ನಾವು ಹಿಂತಿರುಗಿ ಹೋದ ನಂತರ ಆರೋಪಿಗಳು ಚಾಸಾ-1 ಮತ್ತು 2 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾವು ಬಂದ ಹೋದ ನಂತರ ಆರೋಪಿಗಳು ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನಂತರದಲ್ಲಿ ಚಾಸಾ-3 ರವರು ಚಾಸಾ-1 ರವರಿಗೆ 1 ನೇ ಆರೋಪಿಯು ಹೊಡೆದಿರುವ ವಿಷಯನ್ನು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ 3 ಮತ್ತು 4 ನೇ ಆರೋಪಿಯು ಚಾಸಾ-1 ರವರನ್ನು ಹಿಡಿದುಕೊಂಡು 7 ನೇ ಆರೋಪಿಯು ಚಾಸಾ-1 ರವರಿಗೆ ದೊಣ್ಣೆಯಲ್ಲಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ.

ಜಗಳವನ್ನು ಬಿಡಿಸಲು ಬಂದ ಚಾಸಾ-2 ರವರಿಗೆ 7 ಮತ್ತು 2 ನೇ ಆರೋಪಿಯು ಅವರ ಕುತ್ತಿಗೆಗೆ ದೊಣ್ಣೆಯಲ್ಲಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ನನಗೆ ಪ್ರತ್ಯಕ್ಷ ದರ್ಶಿಯಾದ ಚಾಸಾ-3 ರವರು ತಿಳಿಸಿರುತ್ತಾರೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಊರಿನವರಾದ ಕಾರಣ ಚಾಸಾ-1 ಮತ್ತು 2 ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಅವಾಚ್ಯ ಶಬ್ದದಿಂದ ನಿಂದಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದಃ</u>**

ನಾನು ತೋಟದ ಕೆಲಸವನ್ನು ಮಾಡುತ್ತೇನೆ. 1 ನೇ ಆರೋಪಿಯು ನನ್ನ ದೊಡ್ಡಪ್ಪ. ಚಾಸಾ-1 ನನ್ನ ಚಿಕ್ಕಪ್ಪ. ಘಟನೆಯು ನಡೆಯಿತು ಎಂದು ಹೇಳಲಾದ ಸ್ಥಳವು ಚಾಸಾ-1 ರವರಿಗಿ ಸೇರಿರುತ್ತದೆ ಎಂದು ಹೇಳಲು ಯಾವುದೇ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ನಮ್ಮ ಮನೆಯಿಂದ ಆರೋಪಿಗಳ ಮನೆಗೆ ಸುಮಾರು ½ ಕೀ.ಮೀ. ಅಂತರವಿರುತ್ತದೆ. ಸದರಿ ರಸ್ತೆಯಲ್ಲಿ ಚಾಸಾ-3 ರವರು ವಾಹನದ ಮುಖೇನ ಸಂಚರಿರುವುದಿಲ್ಲ. ಚಾಸಾ-1 ಮತ್ತು 2 ರವರ ಮನೆಗೆ ಹೋಗುವಂತಹ ರಸ್ತೆಯನ್ನು ಚಾಸಾ-3 ರವರು ರಿಪೇರಿ ಮಾಡಿಸುವ ವಿಷಯ ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರು ರಸ್ತೆಯನ್ನು ಅಗಲೀಕರಣ ಮಾಡಿಸಿದ ದಿನಾಂಕ ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಕುರಿತು ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಾನು ಓದಿ ನೋಡಿರುವುದಿಲ್ಲ. ಗಲಾಟೆಯಾದ 2 ದಿನದ ನಂತರ ನಾನು ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಅಂದಾಜು 3 ನೇ ತಾರೀಕು ನನ್ನ ಹೇಳಿಕೆಯನ್ನು ನೀಡಿರಬಹುದು. ನನ್ನ ಮತ್ತು ಚಾಸಾ-1 ರವರು ಮಧ್ಯೆ ಒಳ್ಳೆ ಬಾಂಧವ್ಯ ಇರುತ್ತದೆ ಎಂದರೆ ಸರಿ. ಆದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳು ಚಾಸಾ-1 ಮತ್ತು 2 ರವರಿಗೆ ಹೊಡೆಯುವುದನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಆ ರೀತಿಯಾಗಿ ನಾನು ಪೋಲಿಸರಿಗೆ ಮಾಹಿತಿಯನ್ನು ತಿಳಿಸಿ ನನ್ನ ಹೇಳಿಕೆಯಲ್ಲಿ

ನಮೂದಿಸಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1468/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಹರೀಶ್ | ಪ್ರಾಸಾ-5 |
| ತಂದೆಯ ಹೆಸರು | : ಸೋಮಯ್ಯ | ಚಾಸಾ-5 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 12.09.2025 |
| ವಾಸಸ್ಥಳ | : ದೊಡ್ಡಹಳ್ಳ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿಗಳ ಪರಿಚಯ ನನಗಿದೆ. 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1 ರಿಂದ 4 ಮತ್ತು 6 ರವರ ಪರಿಚಯ ನನಗಿದೆ.

ಕಳೆದ 2 ವರ್ಷದ ಹಿಂದೆ ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ರಸ್ತೆಯ ವಿಷಯದ ಕುರಿತಾಗಿ ಜಗಳವಾಗಿರುತ್ತದೆ. ಇದನ್ನು ಹೊರತು ಪಡಿಸಿ ನನಗೆ ಇನ್ಯಾವುದೇ ವಿಷಯ ತಿಳಿದಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ನೋಡಿ ಈ ಹಿಂದೆ ಎಂದೂ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.28.04.2023 ರಂದು ಸಾಕ್ಷಿಯು ಪೋಲಿಸರ ಮುಂದೆ ನೀಡಿದಂತಹ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ಸದರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿಗಳು ನಮ್ಮ ಊರಿನವರು ಮತ್ತು ನಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ,**
**ಮೂಡಿಗೆರೆ**
**ಸಿ.ಸಿ.1468/2023**

| | | |
|---|---|---|
| ಸಾಕ್ಷಿದಾರರ ಹೆಸರು | : ರಮೇಶ್ | ಪ್ರಾಸಾ-6 |
| ತಂದೆಯ ಹೆಸರು | : ಅನ್ನು | ಚಾಸಾ-6 |
| ವಯಸ್ಸು | : 34 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 12.09.2025 |
| ವಾಸಸ್ಥಳ | : ದೊಡ್ಡಹಳ್ಳ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿಗಳ ಪರಿಚಯ ನನಗಿದೆ. 3 ಮತ್ತು 6 ನೇ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಚಾಸಾ-1 ರಿಂದ 5 ರವರ ಪರಿಚಯ ನನಗಿದೆ.

ಅಂದಾಜು ಕಳೆದ 2 ವರ್ಷದ ಹಿಂದೆ ನಾನು ಮನೆಯಲ್ಲಿ ಇದ್ದ ಸಮಯದಲ್ಲಿ ಜೋರಾಗಿ ಗಲಾಟೆ ಶಬ್ದವನ್ನು ಕೇಳಿ ಬಂದು ನೋಡಲಾಗಿ, ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ಜಗಳವಾಗುತ್ತಿತು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಜಗಳವು ಮುಗಿದು ಹೋಗಿರುತ್ತದೆ. ಇದನ್ನು ಹೊರತು ಪಡಿಸಿ ನನಗೆ ಇನ್ನ್ಯಾವುದೇ ವಿಷಯ ತಿಳಿದಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ನೋಡಿ ಈ ಹಿಂದೆ ಎಂದೂ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.28.04.2023 ರಂದು ಸಾಕ್ಷಿಯು ಪೋಲಿಸರ ಮುಂದೆ ನೀಡಿದಂತಹ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿಗಳು ನಮ್ಮ ಊರಿನವರು ಮತ್ತು ನಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.